ನೀಡಲಾದ ಮುಂಗಡವನ್ನು ಮುಂದಿನ ವೆಚ್ಚಗಳಲ್ಲಿ ಸರಿದೂಗಿಸುವುದಾಗಿ ಮಹಾಲೇಖಪಾಲರಿಗೆ ಉತ್ತರವನ್ನು ಸಲ್ಲಿಸಲಾಗಿರುತ್ತದೆ. ಗಿರಿಜನ ಕುಟುಂಬಗಳ ಪುನರ್ವಸತಿ ಕಾರ್ಯವು ಒಂದು ಕ್ಲಿಷ್ಟಕರ ಪ್ರಕ್ರಿಯೆಯಾಗಿದ್ದು, ಅದರಲ್ಲೂ ಮುಖ್ಯವಾಗಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಿಂದ ಮಾಡಲಾಗುತ್ತಿರುವ ಪ್ರಕ್ರಿಯೆಯು ಕಳೆದ 10 ವರ್ಷಗಳಿಂದ ಜಾರಿಯಲ್ಲಿದ್ದು, ಕಾಲಕಾಲಕ್ಕೆ ಜಾರಿಯಲ್ಲಿರುವ ಮಾರ್ಗಸೂಚಿ-ಗಳಲ್ಲದೇ ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದರಿಂದ ಒಟ್ಟಾರೆ ಸಮಸ್ಯೆಯು ಕಾಲಕಾಲಕ್ಕೆ ಮಾರ್ಪಡುಗೊಳ್ಳುತ್ತಲೇ ಇರುವುದಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಹಾಗೂ ವಸ್ತುಸ್ಥಿತಿಯನ್ನು ಆಧರಿಸಿ ಆಕ್ಷೇಪಣೆ ಕೈಬಿಡಲು ಮಹಾಲೇಖಪಾಲರಿಗೆ ಸೂಕ್ತ ಉತ್ತರವನ್ನು ಸಲ್ಲಿಸಲಾಗುತ್ತದೆ. ಸದರಿ ಪ್ರಕರಣವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಬಂದಿರುವುದಿಲ್ಲ.

ಆ) ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಗಿರಿಜನರ ಪುನರ್ವಸತಿಯ ಕುರಿತಾಗಿ ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶದಂತೆ ರಚಿತವಾದ ಸಮಿತಿಯು ಕೈಗೊಳ್ಳುವ ನಿರ್ಧಾರದ ಮೇಲೆಯೇ ಎಲ್ಲಾ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುತಿದ್ದು, ಸಮಿತಿಯ ಯಾವುದೇ ನಿರ್ಣಯಗಳನ್ನು ಉಪೇಕ್ಷೆ ಮಾಡಲಾಗಿರುವುದಿಲ್ಲ.

**ಧನ ಸಹಾಯ ಮಂಜೂರಾತಿ**

36 (516), **ಶ್ರೀ ಕುಮಾರಸ್ವಾಮಿ ಹೆಚ್.ಕೆ.(ಸಕಲೇಶಪುರ)**

**ಪ್ರಶ್ನೆ**

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ನಿರುದ್ಯೋಗಿಗಳು ಮತ್ತು ಮಹಿಳೆಯರು ಸಹಾಯಧನ ನೀರೀಕ್ಷಿಸಿ ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿರುವುದು ನಿಜವೇ?

ಆ) ಕಳೆದ ನಾಲ್ಕು ವರ್ಷಗಳಲ್ಲಿ ಸಹಾಯಧನಕ್ಕೆ ಅರ್ಹರಾದ ಈ ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಹಾಸನ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಫಲಾನುಭವಿಗಳು ಕೈಗಾರಿಕೆ ನಡೆಸುತ್ತಿದ್ದು, ಇದುವರೆವಿಗೂ ಸಹಾಯಧನ ಬಿಡುಗಡೆ-ಯಾಗದಿರುವುದು ನಿಜವೇ?

ಈ)ಹಾಗಿದ್ದಲ್ಲಿ ಸಹಾಯಧನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು (ಮಾಹಿತಿ ನೀಡುವುದು);

**ಶ್ರೀ ನರಸಿಂಹನಾಯಕ ರಾಜಗೌಡ (ಸಣ್ಣ ಕೈಗಾರಿಕೆ ಸಚಿವರು)**

**ಉತ್ತರ**

ಅ) ಹೌದು

ಆ) ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದ 148 ಪರಿಶಿಷ್ಟ ಜಾತಿಗೆ ಸೇರಿದ ಉದ್ಯಮಗಳಿಗೆ ಹಾಗೂ 963 ಮಹಿಳಾ ಉದ್ಯಮಗಳಿಗೆ ಬಂಡವಾಳ ಹೂಡಿಕೆ ಸಹಾಯಧನವನ್ನು ಈ ಕೆಳಕಂಡಂತೆ ಮಂಜೂರು ಮಾಡಲಾಗಿದೆ.

| ವರ್ಷ | ಸಹಾಯಧನ ಮಂಜೂರಾದ ಪರಿಶಿಷ್ಟ ಜಾತಿಗೆ ಸೇರಿದ ಉದ್ದಿಮೆದಾರರ ಘಟಕಗಳ ಸಂಖ್ಯೆ | ಸಹಾಯಧನ ಮಂಜೂರಾದ ಮಹಿಳಾ ಉದ್ದಿಮೆದಾರರ ಘಟಕಗಳ ಸಂಖ್ಯೆ |
|---|---|---|
| 2008–09 | 31 | 278 |
| 2009–10 | 52 | 404 |
| 2010–11 | 30 | 143 |
| 2011–12 | 35 | 138 |
| **ಒಟ್ಟು** | **148** | **963** |

ಇ) ಹೌದು, ಮಂಜೂರಾದ ಸಹಾಯಧನವನ್ನು ಪೂರ್ಣವಾಗಿ ಬಿಡುಗಡೆ ಮಾಡಿರುವುದಿಲ್ಲ.

ಈ) ಸಹಾಯಧನ ಮಂಜೂರಾದ ಘಟಕಗಳಿಗೆ ಮಂಜೂರಾತಿಯ ಜೇಷ್ಠತೆಗನುಗುಣವಾಗಿ ಮತ್ತು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕನುಗುಣವಾಗಿ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ. ಸಹಾಯಧನ ಬಿಡುಗಡೆಯಾದ ವಿವರಗಳು ಕೆಳಕಂಡಂತಿದೆ.

| ವರ್ಷ | ಸಾಮಾನ್ಯ ವರ್ಗ | ವಿಶೇಷ ವರ್ಗ (ಪ.ಜಾ.ಪಪಂ, ಮಹಿಳೆ) |
|---|---|---|
| 2006–07 | ಶೇ.100 | ಶೇ.100 |
| 2007–08 | ಶೇ.50 | ಶೇ.75 |
| 2008–09 | ಶೇ.25 | ಶೇ.50 |

ಪ್ರಸಕ್ತ ಸಾಲಿನಲ್ಲಿ 2007–08 ಮತ್ತು 2008–09 ನೇ ಸಾಲಿನಲ್ಲಿ ಸಹಾಯಧನ ಮಂಜೂರಾದ ಎಲ್ಲಾ ವರ್ಗದ ಘಟಕಗಳಿಗೆ ಬಾಕಿಯಿರುವ ಸಹಾಯಧನವನ್ನು ಹಾಗೂ ಎಸ್.ಸಿ/ಎಸ್.ಟಿ ವರ್ಗದ ಘಟಕಗಳಿಗೆ 2010–11

ನೇ ಸಾಲಿನವರೆಗೆ ಸಹಾಯಧನ ಮಂಜೂರಾಗಿರುವ ಘಟಕಗಳಿಗೆ ಅರ್ಹ ಸಹಾಯಧನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.

**Reply**

a) Yes

b) During the last 4 years, 148 entrepreneurs belonging to Scheduled Caste & 963 Women entrepreneurs have been sanctioned investment subsidy in the State as under

| Year | No of SC entrepreneurs Units | No of Women entrepreneurs Units |
|---|---|---|
| 2008–09 | 31 | 278 |
| 2009–10 | 52 | 404 |
| 2010–11 | 30 | 143 |
| 2011–12 | 35 | 138 |
| Total | 148 | 963 |

c) Yes, Subsidy has not been released fully to all the units.

d) The sanctioned Subsidy amount is being released to the units based on the senjority and availability of grants from the Govt.

The year-wise details of the Subsidy released is as under:-

| Year | Releases made | |
|---|---|---|
| | General category | Special category |
| 2006–07 | 100% | 100% |
| 2007–08 | 50% | 75% |
| 2008–09 | 25% | 50% |

e) Action is being taken to release the pending subsidy in full to general category pertaining to 2007-08 and 2008-09 and upto 2010-11 in respect of special category during the current year.

**ಅನುದಾನ ಮಂಜೂರು**

**40 (458), ಶ್ರೀ ಮಂಜುನಾಥ್ ಹೆಚ್.ಪಿ.(ಹುಣಸೂರು)**

**ಪ್ರಶ್ನೆ**

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿಗೆ 2008–09 ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ವಿವಿಧ ಯೋಜನೆಗಳಡಿ ಸರ್ಕಾರದಿಂದ ಮಂಜೂರಾದ ಹಣವೆಷ್ಟು; (ಯೋಜನಾವಾರು, ಲೆಕ್ಕಶೀರ್ಷಿಕೆವಾರು ವಿವರ ನೀಡುವುದು) ?

ಆ) ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಹಾಗೂ ಕೈಗಾರಿಕಾ ಸಂಬಂಧ ತರಬೇತಿ ಯೋಜನೆ ಮುಂತಾದ ಇತರೆ ಯೋಜನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದ್ದು, ಯಾವುದೇ ವಿಚಾರವು ವಿಧಾನ ಸಭಾ ಸದಸ್ಯರ ಅಥವಾ ಜನಪ್ರತಿನಿಧಿಗಳ ಗಮನಕ್ಕೆ ಬಾರದಂತೆ ಅನುಷ್ಠಾನಗೊಳಿಸಲಾಗಿದೆ. ಆದ್ದರಿಂದ ವಿವಿಧ ಯೋಜನೆಗಳಡಿ ಆಯ್ಕೆಗಾಗಿ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯನ್ನು ರಚಿಸುವ ಕುರಿತು ಮಾಹಿತಿ ಒದಗಿಸುವುದು?

**ಶ್ರೀ ನರಸಿಂಹ ನಾಯಕ ರಾಜುಗೌಡ (ಸಣ್ಣ ಕೈಗಾರಿಕೆ ಸಚಿವರು)**

**ಉತ್ತರ**

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಹಾಗೂ ಕೈಗಾರಿಕಾ ಸಂಬಂಧ ತರಬೇತಿ ಯೋಜನೆಗಳನ್ನು ಯೋಜನೆಗಳ ಮಾರ್ಗ ಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಧಾನ ಮಂತ್ರಿ ಉದ್ಯೋಗ ಸೃಜನೆ ಯೋಜನೆಯಡಿ ಪಲಾನುಭವಿಗಳ ಆಯ್ಕೆ ಸಮಿತಿಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಸದಸ್ಯರು ಇರುತ್ತಾರೆ.